## ರಾಯಲ್ ಸ್ಕ್ವೀಜ್ ಕೇಜ್

ನಮ್ಮ ದೇಶದಲ್ಲೇ ಅತ್ಯಂತ ಹಳೆಯ ಮತ್ತು ಪ್ರಸಿದ್ಧವಾದ ಮೃಗಾಲಯಗಳಲ್ಲಿ ಒಂದಾದ ಚಾಮರಾಜೇಂದ್ರ ಮೃಗಾಲಯ (ಮೈಸೂರು) ಜನಪ್ರಿಯ ವಿಹಾರ ತಾಣ. ಇಲ್ಲಿರುವ ವೈವಿಧ್ಯಮಯ ಪ್ರಾಣಿ, ಪಕ್ಷಿಗಳನ್ನು ನೋಡುತ್ತಾ ಸುತ್ತುಹಾಕುವಾಗ ವನ್ಯಜೀವಿಗಳಲ್ಲದೇ ಇನ್ನೂ ಕೆಲವು ಆಕರ್ಷಣೆಗಳು ನಮ್ಮ ಕಣ್ಸೆಳೆಯುತ್ತವೆ. ಅಂಥವುಗಳಲ್ಲೊಂದು ಈ ರಾಯಲ್ ಸ್ಕ್ವೀಜ್ ಕೇಜ್. ಇದು ಪ್ರಾಣಿಗಳನ್ನು ಹಿಡಿಯಲು ಬಳಸುತ್ತಿದ್ದ ರಾಜರ ಕಾಲದ ಒಂದು ವಿಶಿಷ್ಟ ಪಂಜರ. ಈಗ ಮೈಸೂರು ಮೃಗಾಲಯದಲ್ಲಿ ಸ್ಮರಣೀಯ ಗೂಡಿನಲ್ಲಿ ಸಂರಕ್ಷಿತವಾಗಿದೆ. ಈ ಪ್ರಾಚೀನ ಪಂಜರವನ್ನು ನೋಡಿ ಅಂದಿನ ದಿನಗಳಲ್ಲಿ ಕಾಡು ಪ್ರಾಣಿಗಳನ್ನು ಹೇಗೆ ಹಿಡಿಯುತ್ತಿದ್ದರೆಂದು ನಾವು ಊಹಿಸಬಹುದು.

—ಬಿ.ಆರ್. ಸುಹಾಸ್, ಬೆಂಗಳೂರು






## ಭಾರೀ ಬೂಟು

ಇದು ಸಾಮಾನ್ಯ ಬೂಟಲ್ಲ. ಸುಮಾರು ಆರಡಿ ಎತ್ತರವೂ ನಾಲ್ಕಡಿ ಉದ್ದವೂ ಇದೆ. ಇದನ್ನು ಯಾರು ಧರಿಸುತ್ತಿದ್ದರು ಎಂದಿರಾ? ಯಾರೂ ಧರಿಸುತ್ತಿರಲಿಲ್ಲ. ಧರಿಸಲು ಸಾಧ್ಯವೂ ಇಲ್ಲ ಬಿಡಿ. ಇದು ಸಿಮೆಂಟ್‌ನಿಂದ ತಯಾರಿಸಿದ್ದು. ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿರುವ ಜನರಲ್ ತಿಮ್ಮಯ್ಯನವರ ನಿವಾಸದ ಸನ್ನಿ ಸೈಡ್ ಮ್ಯೂಸಿಯಂನ ಆಕರ್ಷಣೆ ಇದು. ಇಲ್ಲಿ ಯುದ್ಧ ಟ್ಯಾಂಕರ್ ಮತ್ತು ವಿಮಾನವನ್ನೂ ಕಾಣುವುದು ಸಾಧ್ಯ. ಮಡಿಕೇರಿಗೆ ಭೇಟಿಕೊಟ್ಟಾಗ ತಪ್ಪದೆ ವೀಕ್ಷಿಸಿ

—ಕಿಗ್ಗಾಲು ಜಿ. ಹರೀಶ್, ಮೂರ್ನಾಡು

## ವಾಲ್ಮೀಕಿ ಆಶ್ರಮ

ಬೆಂಗಳೂರಿನಿಂದ ಕೋಲಾರ ಮಾರ್ಗವಾಗಿ ಸುಮಾರು 95 ಕಿಮಿ ದೂರ ಕ್ರಮಿಸಿದರೆ ಆವಣಿ ಎಂಬ ಹಳ್ಳಿ ಸಿಗುತ್ತದೆ. ಆ ಊರಿನ ಬೆಟ್ಟಕ್ಕೆ ವಾಲ್ಮೀಕಿ ಪರ್ವತ ಎಂದು ಕರೆಯುತ್ತಾರೆ. ಕುತೂಹಲದಿಂದ ಅದನ್ನು ಏರಿದವರಿಗೆ ಒಂದು ಬಂಡೆ ಎದುರಾಗುತ್ತದೆ. ಅಲ್ಲಿ ತೋರಿಸಿದ ಬಾಣದ ಗುರುತು ಅನುಸರಿಸಿ ಸಾಗಿದರೆ ಅನತಿ ದೂರದಲ್ಲಿ ಶ್ರೀ ವಾಲ್ಮೀಕಿ ಆಶ್ರಮ ಎಂದು ಬರೆದ ಕಲ್ಲು ಬಂಡೆಗಳ ನಿರ್ಮಿತ ಪುಟ್ಟ ಗುಹೆ ಕಾಣಿಸುತ್ತದೆ. ತ್ರೇತಾಯುಗದಲ್ಲಿ ಇದು ವಾಲ್ಮೀಕಿಯ ಆಶ್ರಮ ಆಗಿತ್ತಂತೆ. ಇಲ್ಲೇ ಸೀತಾಮಾತೆ ಲವಕುಶರಿಗೆ ಜನ್ಮ ನೀಡಿದ್ದರು ಎಂಬ ನಂಬಿಕೆ ಇದೆ.

—ಕೆ. ಆದಿತ್ಯ ಹೆಬ್ಬಾರ್, ಹರಪನಹಳ್ಳಿ




